


ಸಾಬೀತುಮಾಡಿದರು. ಆದರೂ ಎಲ್‌ಎಸ್‌ಜಿ ತಂಡವು ಆ ಪಂದ್ಯದಲ್ಲಿ ಸೋಲುಂಡಿತು. ಪಂಜಾಬ್ ಕಿಂಗ್ಸ್ ತಂಡದ ಎದುರಿನ ಇನ್ನೊಂದು ಪಂದ್ಯದಲ್ಲಿ 44 ರನ್‌ಗಳನ್ನು ಚಕಚಕನೆ ಗಳಿಸಿದ ಪಂದ್ಯದಲ್ಲೂ ತಂಡವು ಎಂಟು ವಿಕೆಟ್ ಅಂತರದ ಸೋಲನ್ನು ಅನುಭವಿಸಿತು. ಆ ನಂತರವೇ ಅವರು 12 ರನ್‌ಗಳ ಮೊತ್ತಕ್ಕೆ ಇನಿಂಗ್ಸ್ ಒಂದರಲ್ಲಿ ಔಟಾದದ್ದು.

ಪಂದ್ಯದ ಫಲಿತಾಂಶ ಹೇಗೆಯೇ ಇರಲಿ, ತಮ್ಮ ಆಟದ ವೈಖರಿಯಲ್ಲಿ ರಾಜಿಯಾಗುವುದಿಲ್ಲ ಎನ್ನುವ ಸಂದೇಶವನ್ನು ಈ ಸಲ ಟೂರ್ನಿಯ ಉದ್ದಕ್ಕೂ ಪೂರನ್ ನೀಡುತ್ತಾ ಬಂದಿದ್ದಾರೆ. ಕಳೆದ ಬಾರಿಯ ಚಾಂಪಿಯನ್ ಕೋಲ್ಕತ್ತ ನೈಟ್‌ರೈಡರ್ಸ್ ತಂಡದ ಎದುರಿನ ಪಂದ್ಯದಲ್ಲಿಯಂತೂ 36 ಎಸೆತಗಳಲ್ಲಿ 87 ರನ್‌ಗಳನ್ನು ಕಲೆಹಾಕಿ, ತಮ್ಮ ಮೊನಚು ಹೇಗಿದೆ ಎನ್ನುವುದನ್ನು ಒರೆಗೆ ಹಚ್ಚಿ ತೋರಿಸಿದ್ದರು. ಏಳು ಬೌಂಡರಿಗಳು ಹಾಗೂ 8 ಸಿಕ್ಸರ್‌ಗಳ ಭರ್ಜರಿ ಇನಿಂಗ್ಸ್ ಅದು. ಆ ಪಂದ್ಯದಲ್ಲಿ ಅಭಿಮಾನಿಯೊಬ್ಬರ ತಲೆಗೆ ಇವರು ಸಿಕ್ಸರ್ ಹೊಡೆದ ಚೆಂಡೊಂದು ಬಡಿದಿತ್ತು. ತಲೆಯಲ್ಲಿ ರಕ್ತಸ್ರಾವವಾದ ಆ ಪ್ರೇಕ್ಷಕರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಪಂದ್ಯದಲ್ಲಿ ವಿಜಯಿ ರನ್ ದಾಖಲಾಗುವ ಹೊತ್ತಿಗೆ ಆ ಅಭಿಮಾನಿ ಮತ್ತೆ ಸ್ಟ್ಯಾಂಡ್‌ನಲ್ಲಿ ಕುಳಿತು ಕರತಾಡನ ಮಾಡುತ್ತಿದ್ದರು. ಕ್ರಿಕೆಟ್ ಸ್ಪಿರಿಟ್ ಯಾವ ಮಟ್ಟಿಗೆ ಇದೆ ಎಂಬುದಕ್ಕೆ ಹಿಡಿದ ಕನ್ನಡಿ ಈ ಪ್ರಸಂಗ.

ಗುಜರಾತ್ ಟೈಟನ್ಸ್ ತಂಡದ ಕೋಚ್‌ಗಳ ತಂಡದಲ್ಲಿ ಇರುವ ವಿಕೆಟ್ ಕೀಪರ್ ಪಾರ್ಥಿವ್ ಪಟೇಲ್ ಅವರು ಪೂರನ್ ಬ್ಯಾಟಿಂಗ್ ವೈಖರಿಯ ಕುರಿತು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು, ಅದೂ ತಮ್ಮ ತಂಡದ ಸೋಲಿನ ನಂತರ. 'ನಿಕೊಲಸ್ ಪೂರನ್ ಬ್ಯಾಟ್ ಚಲನೆಯ ವೇಗ ಅಂದಾಜಿಗೆ ಸಿಗದಷ್ಟು ಅದ್ಭುತ. ಅವರನ್ನು ಹೇಗೆ ಔಟ್ ಮಾಡಬೇಕು ಎಂದು ನಿರ್ದಿಷ್ಟವಾಗಿ ಯೋಜಿಸುವುದು ಸಾಧ್ಯವಿಲ್ಲ. ಪಿಚ್ ಸ್ವರೂಪವನ್ನು ಬಹಳ ಬೇಗ ಅರಿತು, ಅದಕ್ಕೆ ತಕ್ಕಂತೆ ಅವರೇ ಆಡಲಾರಂಭಿಸುತ್ತಾರೆ. ಅವರು ಸಿಕ್ಸರ್‌ಗಳನ್ನು ಹೊಡೆಯುವ ಪರಿಯೇ ಬೌಲರ್‌ಗಳ ಜಂಘಾಬಲ ಉಡುಗಿ ಹೋಗುವಂತೆ ಮಾಡುತ್ತದೆ. ಅವರ ಕೈಗಳು–ದೃಷ್ಟಿಯ ಹೊಂದಾಣಿಕೆ ಅಧ್ಯಯನಯೋಗ್ಯ. ಸೋಲಲಿ, ಗೆಲ್ಲಲಿ... ಅಂತಹ ಬ್ಯಾಟ್ಸ್‌ಮನ್ ಆಟ ಕಣ್ತುಂಬಿಕೊಂಡ ಮೇಲೆ ಮನದುಂಬಿ ಅಭಿನಂದಿಸಬೇಕಷ್ಟೆ' ಎಂಬ ಪಾರ್ಥಿವ್ ವಿಶ್ಲೇಷಣೆಯನ್ನು ಅನುಮೋದಿಸದವರು ವಿರಳ.

ಪೂರನ್ ಐಪಿಎಲ್‌ನಲ್ಲಿ ಆಡಲು ಶುರುಮಾಡಿದ್ದು 2019ರಲ್ಲಿ. ಈ ಋತುವಿನ ಏಳು ಪಂದ್ಯಗಳನ್ನೂ ಸೇರಿಸಿದರೆ ಇದುವರೆಗೆ 83 ಪಂದ್ಯಗಳಲ್ಲಿ ಆಡಿದ್ದಾರೆ. 80 ಇನಿಂಗ್ಸ್‌ಗಳಲ್ಲಿ ಬ್ಯಾಟಿಂಗ್ ಮಾಡುವ ಅವಕಾಶ ಸಿಕ್ಕಿದೆ. 34.85ರ ಸರಾಸರಿಯಲ್ಲಿ 2126 ರನ್‌ಗಳನ್ನು ಅವರು ಕಲೆಹಾಕಿದ್ದಾರೆ. ಸ್ಟ್ರೈಕ್‌ರೇಟ್ 168.59. ಒಟ್ಟು 140 ಬೌಂಡರಿಗಳು ಹಾಗೂ 158 ಸಿಕ್ಸರ್‌ಗಳು ಅವರ ದೊಡ್ಡ ಹೊಡೆತಗಳ ಕಥಾನಕವನ್ನು ಬಿಡಿಸಿ ಹೇಳುತ್ತವೆ. ವಿಕೆಟ್ ಕೀಪರ್ ಕೂಡ ಆಗಿರುವ ಪೂರನ್, 38 ಕ್ಯಾಚ್‌ಗಳನ್ನು ಹಿಡಿದಿದ್ದು, ನಾಲ್ಕು ಸ್ಟಂಪಿಂಗ್ ಕೂಡ ಮಾಡಿದ್ದಾರೆ.

2022ರ ಐಪಿಎಲ್ ಋತುವಿನಿಂದ ಇಲ್ಲಿನವರೆಗಿನ ಅವರ ರನ್ ಗಳಿಕೆಯ ಮೇಲೆ ಕಣ್ಣಾಡಿಸೋಣ. 2022ರಲ್ಲಿ ಅವರು ಸನ್‌ರೈಸರ್ಸ್ ಹೈದರಾಬಾದ್ ತಂಡದ ಪರವಾಗಿ ಆಡುತ್ತಿದ್ದರು. ಆಗ 14 ಪಂದ್ಯಗಳಲ್ಲಿ 306 ರನ್‌ಗಳು ದಾಖಲಾಗಿದ್ದವು. ಎರಡು ಅರ್ಧಶತಕಗಳಷ್ಟೇ ಇದ್ದವು. ಮರುವರ್ಷ ಎಲ್‌ಎಸ್‌ಜಿ ತಂಡವನ್ನು ಪ್ರತಿನಿಧಿಸಿ ಆಡತೊಡಗಿದರು. 15 ಪಂದ್ಯಗಳಿಂದ 358 ರನ್‌ಗಳು ಹರಿದುಬಂದವು. ಸ್ಟ್ರೈಕ್‌ರೇಟ್ 172ಕ್ಕೂ ಹೆಚ್ಚು. 2024ರಲ್ಲಿ 14 ಪಂದ್ಯಗಳಲ್ಲಿ 499 ರನ್‌ಗಳನ್ನು ಕಲೆಹಾಕಿದರು. ಸ್ಟ್ರೈಕ್‌ರೇಟ್ 178.21. ಮೂರು ಅರ್ಧಶತಗಳು ಬಂದಿದ್ದ ಋತು ಅದು. 36 ಸಿಕ್ಸರ್‌ಗಳನ್ನು ಸಿಡಿಸಿದ್ದು ಅವರು ಕಂಡುಕೊಂಡಿದ್ದ ಅನುಭವವನ್ನು ರುಜುವಾತುಪಡಿಸುತ್ತವೆ. ಕಳೆದ ವರ್ಷವಂತೂ ಅವರ ಸ್ಟ್ರೈಕ್‌ರೇಟ್ 208.77 ಇತ್ತು. ಮೂರು ಅರ್ಧ ಶತಕಗಳು ಸೇರಿದ್ದವು.

ಈ ಬಾರಿ ಅವರು ನಡುಘಟ್ಟದಲ್ಲಿಯೇ ಜೋಡಿಸಿಟ್ಟಿರುವ 357 ರನ್‌ಗಳು ಅವರ ಸ್ಥಿರತೆಯ ಮೇಲೆ ಬೆಳಕು ಚೆಲ್ಲುತ್ತದೆ. ಸಿಕ್ಸರ್ ಸಂಖ್ಯೆಯಲ್ಲೂ ಹಿಂದಿನ ವರ್ಷಗಳ ತಮ್ಮ ದಾಖಲೆಯನ್ನು ಮೀರುವ ಸೂಚನೆಯನ್ನೂ ಕೊಟ್ಟಿದ್ದಾರೆ.

ಪೂರನ್ ಆಟದಲ್ಲಿ ಅಂಥ ವಿಶೇಷ ಏನಿದೆ ಎಂಬ ಪ್ರಶ್ನೆಯೊಂದು ಸಹಜವಾಗಿಯೇ ಏಳುತ್ತದೆ. ಚುಟುಕು ಕ್ರಿಕೆಟ್‌ನ ಮಟ್ಟಿಗೆ ಸ್ಪಿನ್ ಬೌಲರ್‌ಗಳ ವಿರುದ್ಧ ದೊಡ್ಡ ಹೊಡೆತಗಳನ್ನು ಲೀಲಾಜಾಲವಾಗಿ ಆಡಬಲ್ಲ ವಿಶ್ವದ ಶ್ರೇಷ್ಠ ಬ್ಯಾಟರ್ ಅವರೆನ್ನುವುದು ಸದ್ಯದ ವಿಶ್ಲೇಷಣೆ. ಈ ಹಿಂದಿನ ಎರಡು ಐಪಿಎಲ್ ಋತುಗಳಲ್ಲಿ ಅವರು ಸ್ಪಿನ್ ಬೌಲರ್‌ಗಳ ವಿರುದ್ಧ 184.4ರ ಸ್ಟ್ರೈಕ್‌ರೇಟ್‌ನಲ್ಲಿ, 89.6ರ ಸರಾಸರಿಯಲ್ಲಿ ರನ್ ಹೆಕ್ಕಿದ್ದಾರೆ. ಹತ್ತು ಹದಿನೈದು ನಿಮಿಷ ಅವರು ಕ್ರೀಸ್‌ನಲ್ಲಿ ನಿಂತರೆಂದರೆ, ಔಟ್ ಮಾಡುವುದು ಬಲು ಕಷ್ಟ ಎಂಬುದು ಬೌಲರ್‌ಗಳ ಅನುಭವನುಡಿ.

2024ರ ಜನವರಿಯಿಂದ ಇದುವರೆಗೆ ಪೂರನ್ ಚುಟುಕು ಕ್ರಿಕೆಟ್‌ನಲ್ಲಿ 211 ಸಿಕ್ಸರ್‌ಗಳನ್ನು ಗಳಿಸಿದ್ದಾರೆ. ಈ ಪಟ್ಟಿಯಲ್ಲಿನ ಎರಡನೆಯವರು ದಕ್ಷಿಣ ಆಫ್ರಿಕಾದ ಹೆನ್ರಿಚ್ ಕ್ಲಾಸೆನ್. ಅವರು ಹೊಡೆದಿರುವ ಸಿಕ್ಸರ್‌ಗಳು 124. ಪೂರನ್ ತುಲನೆಯಲ್ಲಿ ಅದು ಎಷ್ಟು ಕಡಿಮೆ ಎನಿಸುತ್ತದೆ, ನೋಡಿ. ಕಳೆದ ಕ್ಯಾಲೆಂಡರ್ ವರ್ಷದಲ್ಲಿ ಒಟ್ಟು 139 ಸಿಕ್ಸರ್‌ಗಳನ್ನು ಪೂರನ್ ಹೊಡೆದರು. ಆ ಮೂಲಕ, ಕ್ರಿಸ್‌ಗೇಲ್ ಹೆಸರಿನಲ್ಲಿ ಇದ್ದ ಕ್ಯಾಲೆಂಡರ್ ವರ್ಷವೊಂದರಲ್ಲಿ ಚುಟುಕು ಕ್ರಿಕೆಟ್‌ನಲ್ಲಿದ್ದ ಗರಿಷ್ಠ–135–ಸಿಕ್ಸರ್‌ಗಳ ಸಾಧನೆಯನ್ನು ಮುರಿದುಹಾಕಿದರು.

'ಸಿಕ್ಸರ್ ಹೊಡೆಯಲು ನಾನು ಯಾವುದೇ ಪ್ಲ್ಯಾನ್ ಮಾಡುವುದಿಲ್ಲ' ಎಂದು ಪೂರನ್ ಈ ಐಪಿಎಲ್ ಋತು ಪ್ರಾರಂಭವಾಗುವ ಮೊದಲು ಹೇಳಿದ್ದರು. ಪ್ಲ್ಯಾನ್ ಮಾಡದೇ ಇರುವಾಗಲೇ ಪರಿಸ್ಥಿತಿ ಹೀಗೆ, ಇನ್ನು ಪ್ಲ್ಯಾನ್ ಮಾಡಿದರೆ ಏನು ಗತಿ?

ಪ್ರತಿಕ್ರಿಯಿಸಿ: **feedback@sudha.co.in**